

‘ರಿಸರ್ವೇಶನ್’ ಚಿತ್ರದ ನಿರ್ಮಾಣಕ್ಕೆ ರಾಷ್ಟ್ರಪ್ರಶಸ್ತಿ ಪಡೆದ ಯಾಕುಬ್ ಖಾದರ್ ಗುಲ್ವಾಡಿಯವರು ಇದೀಗ ‘ಟ್ರಿಪಲ್ ತಲಾಖ್’ ಚಿತ್ರವನ್ನು ರೂಪಿಸಿದ್ದಾರೆ. ಈ ಬಾರಿ ಚಿತ್ರದ ನಿರ್ದೇಶನವೂ ಅವರದೇ. ಕಾನೂನಿನ ಮೂಲಕ ಶಿಕ್ಷೆ ನೀಡಬಹುದು, ಆದರೆ ಮುರಿದ ಬದುಕುಗಳನ್ನು ಸರಿಪಡಿಸುವುದು ಹೇಗೆ ಎನ್ನುವ ಸೂಕ್ಷ್ಮ ಪ್ರಶ್ನೆಯನ್ನು ಮುಂದಿಡುವ ಈ ಸಿನಿಮಾ ಇಂಗ್ಲೆಂಡ್‌ನಲ್ಲಿ ಮೊದಲ ಪ್ರದರ್ಶನ ಕಂಡಿದೆ. ಚಿತ್ರದ ಬಗೆಗಿನ ಮೊದಲ ವಿಶ್ಲೇಷಣೆ ‘ಸುಧಾ’ದಲ್ಲಿ.

■ ಯೋಗೀಂದ್ರ ಮರವಂತೆ

# ಕೊನೆಯಿರದ ಪ್ರಶ್ನೆಗಳ ಸನ್ನಿಧಿಯಲ್ಲಿ...

## ‘ರಿಸರ್ವೇಷನ್’ ಗುಲ್ವಾಡಿಯವರ ಹೊಸ ಸಾಹಸ ಟ್ರಿಪಲ್ ತಲಾಕ್

ಕರ್ನಾಟಕ ಸಿನಿಮಾ ಉದ್ಯಮದ ರಾಜಧಾನಿ ಯಾವುದು ಎನ್ನುವ ಪ್ರಶ್ನೆಯನ್ನು ಕೆಲವು ದಶಕಗಳ ಹಿಂದೆ ಕೇಳಿದ್ದರೆ, ‘ಗಾಂಧಿನಗರ’ ಎಂದು ಕನ್ನಡ ಸಿನಿಮಾಗಳನ್ನು ಹೆಚ್ಚಾಗಿ ನೋಡದವರೂ ಉತ್ತರಿಸುತ್ತಿದ್ದರೇನೋ. ಈಗಲೂ ಕನ್ನಡ ಸಿನಿಮಾ ಜಗತ್ತಿನ ಕೇಂದ್ರಸ್ಥಾನ, ವಾಣಿಜ್ಯ ರಾಜಧಾನಿ ಬೆಂಗಳೂರಿನಲ್ಲಿಯೇ ಇದ್ದರೂ ಅದನ್ನು ಗಾಂಧಿನಗರದಂತಹ ಒಂದು ಸಣ್ಣ ಸ್ಥಳಕ್ಕೆ ಸೀಮಿತಗೊಳಿಸುವುದು ಸಮರ್ಪಕ ಅಲ್ಲ.

ಸಿನಿಮಾಕಲೆ ಹಾಗೂ ಅದನ್ನು ಆಧರಿಸಿದ ಉದ್ಯಮ ಎಲ್ಲ ಭಾಷೆ ದೇಶಗಳಲ್ಲಿ ಬದಲಾವಣೆಗೊಂಡಂತೆ ನಮ್ಮ ಕನ್ನಡದಲ್ಲೂ ಮಾರ್ಪಾಡನ್ನು ಕಂಡಿವೆ. ಸಿನಿಮಾ ತಯಾರಾಗುವ ಸ್ಥಳದಿಂದ ಹಿಡಿದು ತಂತ್ರಜ್ಞಾನದವರೆಗೆ ಚಿತ್ರನಿರ್ಮಾಣ ವಿತರಣೆಯಿಂದ ಹಿಡಿದು ಪ್ರದರ್ಶನಗಳ ತನಕ ಎಲ್ಲ ಅಂಗಗಳಲ್ಲೂ ಪರಿವರ್ತನೆಗಳು ಆಗಿವೆ. ಕೈಗೆಟುಕುವ ಬೆಲೆಯಲ್ಲಿ ದೊರೆಯುವ ಸಿನಿಮಾ ಚಿತ್ರೀಕರಣ ಸಂಬಂಧಿ ಉಪಕರಣಗಳು, ಪ್ರದರ್ಶನಕ್ಕೆ ಮುಕ್ತವಾದ ಡಿಜಿಟಲ್ ವೇದಿಕೆಗಳು ಅಂಗೈಯಲ್ಲಿ ಮೊಬೈಲ್ ಹಿಡಿದು ಇಡೀ ಚಲನಚಿತ್ರ ವೀಕ್ಷಿಸುವ ಪ್ರೇಕ್ಷಕರು – ಇವೆಲ್ಲವೂ ನವೀನ ಡಿಜಿಟಲ್ ಯುಗದ ಆಗಮನವನ್ನು ಸಾರಿವೆ. ಸಿನಿಮಾವನ್ನು ಯಾರು ಮಾಡಬಹುದು ಎನ್ನುವ ಪ್ರಶ್ನೆಯನ್ನು ಈ ಕಾಲದಲ್ಲಿ ಕೇಳಿದರೆ ಯಾರೂ ಮಾಡಬಹುದು ಎನ್ನುವುದೇ ಸರಿಯಾದ ಉತ್ತರ. ಮತ್ತೆ ಕನ್ನಡ ಸಿನಿಮಾವೊಂದನ್ನು ನಿರ್ಮಿಸುವವರು ಬೆಂಗಳೂರಿನ ಗಾಂಧಿನಗರದಲ್ಲಿಯೂ ಈಗ ಇರಬೇಕಾಗಿಲ್ಲ, ಅವರು ಕರಾವಳಿಯ ಕುಂದಾಪುರದ ಸಮೀಪದ ಹಳ್ಳಿಯಾದ ಗುಲ್ವಾಡಿಯಲ್ಲಿ ಇದ್ದರೂ ನಡೆಯುತ್ತದೆ. ಮತ್ತೆ ಆ ಸಿನಿಮಾದ ಮೊದಲ ಪ್ರದರ್ಶನವನ್ನು ನೋಡುವವರು ಕನ್ನಡ ನಾಡಿನ ಗಾಂಧಿನಗರ ಹಾಗು ಗುಲ್ವಾಡಿ ಇವೆರಡರಿಂದಲೂ ಬಹುದೂರದ ಇಂಗ್ಲೆಂಡಿನ ನೈಋತ್ಯ ಕರಾವಳಿಯ ಬ್ರಿಸ್ಟಲ್ ಎನ್ನುವ ಊರಿನ ಕನ್ನಡಿಗರೂ ಆಗಿರಬಹುದಾದ ಸಾಧ್ಯತೆ ಇದೆ.

2017ರಲ್ಲಿ ‘ರಿಸರ್ವೇಶನ್’ ಚಿತ್ರ ನಿರ್ಮಿಸಿ ರಾಷ್ಟ್ರಪ್ರಶಸ್ತಿ ಪಡೆದ ಯಾಕುಬ್ ಖಾದರ್ ಗುಲ್ವಾಡಿಯವರು ಇದೀಗ ‘ಟ್ರಿಪಲ್ ತಲಾಕ್’ ಚಿತ್ರವನ್ನು ನಿರ್ದೇಶಿಸಿ ನಿರ್ಮಿಸಿದ್ದಾರೆ. ಡಿಸೆಂಬರ್ ಎಂಟರ ಭಾನುವಾರದಂದು ಬ್ರಿಸ್ಟಲ್ ಅಲ್ಲಿ ತಮ್ಮ ಚಿತ್ರವನ್ನು ಪ್ರದರ್ಶಿಸಿದ್ದಾರೆ. ಕನ್ನಡ ಚಿತ್ರೋದ್ಯಮ ಕಂಡ ಒಂದು ಸ್ವಾಗತಾರ್ಹ ಬದಲಾವಣೆಯೆಂದರೆ ಸಿನಿಮಾ ಮಾಡ ಬಯಸುವ ಸಾಮಾನ್ಯರೂ ಸಿನಿಮಾ ಮಾಡುವ ವಾತಾವರಣ ನಿರ್ಮಾಣವಾಗಿರುವುದು.

ಸಿನಿಮಾಗಳ ಮೂಲಕ ಕತೆ ಹೇಳುವ ಮನಸ್ಸಿರುವವರು ಅಥವಾ ತಾವು ನೇಯ್ದ ವಿಶಿಷ್ಟ ಕತೆ ಸಿನಿಮಾ ಉತ್ಸವಗಳಲ್ಲಿ ಪ್ರದರ್ಶಿತವಾಗಬೇಕು, ಪ್ರಶಸ್ತಿ ಪಡೆಯಬೇಕು ಎನ್ನುವ ಕನಸಿರುವವರೆಲ್ಲರೂ ಸಿನಿಮಾ ಉದ್ಯಮದ ಆಳವಾದ ಅನುಭವ, ಹಿನ್ನೆಲೆ, ಮನೆತನ, ಪ್ರಭಾವ, ಇತ್ಯಾದಿಗಳ ಹಂಗಿಲ್ಲದೆ ಚಿತ್ರ ನಿರ್ಮಿಸಬಹುದು. ಸಿನಿಮಾಕ್ಕೆ ಹೊಂದುವ ಕತೆ, ಸಿನಿಮಾ ಮಾಡುವ ಬಗೆಗಿನ ತುಸು ಮಾಹಿತಿ, ಚಿಕ್ಕ ಖರ್ಚಿನಲ್ಲಿ ಸಿನಿಮಾ ಮಾಡಿಮುಗಿಸುವ ಯೋಜನೆ, ಇವಿಷ್ಟು ಇದ್ದರೆ ಬಹುಚರ್ಚಿತವಾಗಬಲ್ಲ ವಸ್ತುವಿನಿಂದ